**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಬೆಂಗಳೂರು ನಗರ ವೈಯ್ಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎರಡು ಕ್ರಿಮಿನಲ್ ಮೊಕದ್ದಮೆಗಳನ್ನು ಹಾಗೂ ರಾಮನಗರ ಜಿಲ್ಲೆ ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಮೊಕದ್ದಮೆಯನ್ನು ಒಳಗೊಂಡಂತೆ ಹಾಗೂ ಈ ಸಂಬಂಧ ರಾಜ್ಯದ ಇತರೆ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಸಿಐಡಿಯ ವಿಶೇಷ ತನಿಖಾ ತಂಡ (SIT) ಕ್ಕೆ ವಹಿಸುವ ಬಗ್ಗೆ.

**ಓದಲಾಗಿದೆ**: 1. ಬೆಂಗಳೂರು ನಗರ ವೈಯ್ಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 121/2024, ದಿನಾಂಕ:13.09.2024 .
2. ಬೆಂಗಳೂರು ನಗರ ವೈಯ್ಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ:122/2024, ದಿನಾಂಕ: 13.09.2024.
3. ರಾಮನಗರ ಜಿಲ್ಲೆ, ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 312/2024, ದಿನಾಂಕ:18.09.2024.

**ಪ್ರಸ್ತಾವನೆ:-**

ಮೇಲೆ ಓದಲಾದ (1) ಮತ್ತು (2)ರಲ್ಲಿ ದೂರುದಾರರು ತಮಗೆ ಜಾತಿ ನಿಂದನೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು, ಹಲ್ಲೆ ಮಾಡಿ ಹಾಗೂ ಲಂಚಕ್ಕಾಗಿ ಬೇಡಿಕೆ ಇಟ್ಟಿರುವ ಕುರಿತು ಶ್ರೀ ಮುನಿರತ್ನ, ಶಾಸಕರು, ಹಾಗೂ ಇತರರ ವಿರುದ್ಧ ಬೆಂಗಳೂರು ನಗರ ವೈಯ್ಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 121/2024, ಕಲಂ 506, 504, 385, 420, 323 ರೆ/ವಿ 34 ಐಪಿಸಿ ಹಾಗೂ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 122/2024, ಕಲಂ 153(ಎ)(1)(ಎ)(ಬಿ), 509, 504, 153 ಐಪಿಸಿ ಹಾಗೂ ಕಲಂ 3(1)(ಆರ್)(ಎಸ್) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯ್ದೆ ರಡಿ ದಿನಾಂಕ:13.09.2024 ರಂದು ಪ್ರಕರಣಗಳು ದಾಖಲಾಗಿರುತ್ತದೆ.

ಮೇಲೆ ಓದಲಾದ (3)ರಲ್ಲಿ ಮಹಿಳೆಯೊಬ್ಬರ ದೂರಿನ ಮೇರೆಗೆ ಶ್ರೀ ಮುನಿರತ್ನ, ಶಾಸಕರು, ಹಾಗೂ ಇತರರ ವಿರುದ್ಧ ರಾಮನಗರ ಜಿಲ್ಲೆ, ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 312/2024, ಕಲಂ 354(ಎ), 354(ಸಿ), 376(2)(ಎನ್), 506, 504, 120(ಬಿ), 149, 384, 406, 308 ಐಪಿಸಿ ಮತ್ತು ಕಲಂ 66, 66(ಇ) ಐ.ಟಿ ಕಾಯ್ದೆ-2000 ರಡಿ ದಿನಾಂಕ:18.09.2024ರಂದು ಪ್ರಕರಣವು ದಾಖಲಾಗಿರುತ್ತದೆ.

ಸರ್ಕಾರವು ಈ ಮೇಲ್ಕಂಡ ಪ್ರಕರಣಗಳ ಗಂಭೀರತೆಯನ್ನು ಪರಿಗಣಿಸಿ, ಈ ಪ್ರಕರಣಗಳ ಸಮಗ್ರ ತನಿಖೆಯನ್ನು ಕೈಗೊಳ್ಳಲು ರಾಜ್ಯದ ವಿಶೇಷ ತನಿಖಾ ಸಂಸ್ಥೆಯಾದ ಸಿಐಡಿಯ ಒಂದು ವಿಶೇಷ ತನಿಖಾ ತಂಡ (Special Investigation Team)ವನ್ನು ರಚಿಸುವುದು ಸೂಕ್ತವೆಂದು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 142 ಸಿಒಡಿ 2024, ಬೆಂಗಳೂರು, ದಿನಾಂಕ:21/09/2024.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶಾಸಕರಾದ ಶ್ರೀ ಮುನಿರತ್ನ ಹಾಗೂ ಇತರರ ವಿರುದ್ಧ ಬೆಂಗಳೂರು ನಗರ ವೈಯ್ಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 121/2024, ಕಲಂ 506, 504, 385, 420, 323 ರೆ/ವಿ 34 ಐಪಿಸಿ, ಬೆಂಗಳೂರು ನಗರ ವೈಯ್ಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 122/2024, ಕಲಂ 153(ಎ)(1)(ಎ)(ಬಿ), 509, 504, 153 ಐಪಿಸಿ ಮತ್ತು ರಾಮನಗರ ಜಿಲ್ಲೆ, ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 312/2024, ಕಲಂ 354(ಎ), 354(ಸಿ), 376(2)(ಎನ್), 506, 504, 120(ಬಿ), 149, 384, 406, 308 ಐಪಿಸಿ ಮತ್ತು ಕಲಂ 66, 66(ಇ) ಐ.ಟಿ ಕಾಯ್ದೆ-2000 ರಡಿ ದಾಖಲಾಗಿರುವ ಪ್ರಕರಣಗಳ ಕುರಿತು ಸಮಗ್ರ ತನಿಖೆಯನ್ನು ಕೈಗೊಳ್ಳಲು ರಾಜ್ಯದ ವಿಶೇಷ ತನಿಖಾ ಸಂಸ್ಥೆಯಾದ ಸಿಐಡಿಯ ಈ ಕೆಳಕಂಡ ಹಿರಿಯ ಪೊಲೀಸ್ ಅಧಿಕಾರಿಗಳನ್ನೊಳಗೊಂಡ ಒಂದು ವಿಶೇಷ ತನಿಖಾ ತಂಡ (Special Investigation Team)ವನ್ನು ರಚಿಸಿ ಸರ್ಕಾರವು ಆದೇಶಿಸಿದೆ.

| | | |
|---|---|---|
| 1. | ಶ್ರೀ ಬಿ. ಕೆ. ಸಿಂಗ್, ಐ.ಪಿ.ಎಸ್,<br>ಅಪರ ಪೊಲೀಸ್ ಮಹಾ ನಿರ್ದೇಶಕರು,<br>ಆರ್ಥಿಕ ಅಪರಾಧಗಳು, ಸಿ.ಐ.ಡಿ. ಬೆಂಗಳೂರು | ಮುಖ್ಯಸ್ಥರು |
| 2. | ಶ್ರೀ ಲಭುರಾಮ್ ಐ.ಪಿ.ಎಸ್,<br>ಪೊಲೀಸ್ ಮಹಾನಿರೀಕ್ಷಕರು,<br>ಕೇಂದ್ರ ವಲಯ, ಬೆಂಗಳೂರು. | ಸದಸ್ಯರು |
| 3. | ಶ್ರೀಮತಿ ಸೌಮ್ಯಲತ ಐ.ಪಿ.ಎಸ್,<br>ಪೊಲೀಸ್ ಅಧೀಕ್ಷಕರು,<br>ರೈಲ್ವೇಸ್, ಬೆಂಗಳೂರು. | ಸದಸ್ಯರು |
| 4. | ಶ್ರೀ ಸಿ.ಎ.ಸೈಮನ್,<br>ಪೊಲೀಸ್ ಅಧೀಕ್ಷಕರು,<br>(ಪ್ರಸ್ತುತ ಸ್ಥಳನಿರೀಕ್ಷಣೆ). | ಸದಸ್ಯರು |

ಮೇಲ್ಕಂಡ ಮೂರು ಪ್ರಕರಣಗಳು ಸೇರಿದಂತೆ ಹಾಗೂ ಈ ಸಂಬಂಧ ಮೇಲ್ಕಂಡ ಶಾಸಕರು ಹಾಗೂ ಇತರರ ವಿರುದ್ಧ ರಾಜ್ಯದ ಇತರೆ ಪೊಲೀಸ್ ಠಾಣೆಗಳಲ್ಲಿ ದಾಖಲಾದ / ದಾಖಲಾಗಬಹುದಾದ ಎಲ್ಲಾ ಪ್ರಕರಣಗಳನ್ನು ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು ಈ ವಿಶೇಷ ತನಿಖಾ ತಂಡ (Special Investigation Team)ಕ್ಕೆ ವರ್ಗಾಯಿಸುವುದು ಹಾಗೂ ವಿಶೇಷ ತನಿಖಾ ತಂಡಕ್ಕೆ ಅವಶ್ಯವಿರುವ ಇತರೆ ಸದಸ್ಯರುಗಳು, ಅಧಿಕಾರಿಗಳು / ಸಿಬ್ಬಂದಿಗಳ ಅವಶ್ಯಕತೆ ಇದ್ದಲ್ಲಿ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು, ಬೆಂಗಳೂರು ರವರ ಅನುಮೋದನೆಯೊಂದಿಗೆ ತನಿಖಾ ತಂಡಕ್ಕೆ ಸೇರಿಸಿಕೊಳ್ಳುವುದು.

ವಿಶೇಷ ತನಿಖಾ ತಂಡವು (Special Investigation Team) ಸಿಐಡಿಯಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದು.

ಪೊಲೀಸ್ ಮಹಾ ನಿರ್ದೇಶಕರು, ಸಿಐಡಿ, ರವರ ಮೇಲ್ವಿಚಾರಣೆಯಲ್ಲಿ ಈ ವಿಶೇಷ ತನಿಖಾ ತಂಡ(Special Investigation Team)ವು ಕಾರ್ಯ ನಿರ್ವಹಿಸುವುದು.

...3

ವಿಶೇಷ ತನಿಖಾ ತಂಡವು ಮೇಲ್ಕಂಡ ಪ್ರಕರಣಗಳು ಹಾಗೂ ಮೇಲ್ಕಂಡ ಶಾಸಕರುಗಳ ವಿರುದ್ಧ ದಾಖಲಾಗುವ ಇತರೆ ಎಲ್ಲಾ ಪ್ರಕರಣಗಳ ಸಮಗ್ರ ತನಿಖೆಯನ್ನು ನಡೆಸಿ, ತನಿಖಾ ವರದಿಯನ್ನು ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು, ಬೆಂಗಳೂರು ರವರ ಮುಖಾಂತರ ಶೀಘ್ರವಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

S. Ambika 21/9/2024
(ಎಸ್. ಅಂಬಿಕಾ)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ(ಅಪರಾಧಗಳು)

**ಇವರಿಗೆ:**

1. ಮಹಾ ನಿರ್ದೇಶಕರು ಹಾಗೂ ಆರಕ್ಷಕ ಮಹಾ ನಿರೀಕ್ಷಕರು ಕರ್ನಾಟಕ, ನೃಪತುಂಗ ರಸ್ತೆ, ಬೆಂಗಳೂರು.
2. ಪೊಲೀಸ್ ಮಹಾ ನಿರ್ದೇಶಕರು, ಸಿಐಡಿ, ವಿಶೇಷ ಘಟಕಗಳು ಹಾಗೂ ಆರ್ಥಿಕ ಅಪರಾಧಗಳು, ಕಾರ್ಲಟನ್ ಭವನ, ಬೆಂಗಳೂರು.
3. ಶ್ರೀ ಬಿ. ಕೆ. ಸಿಂಗ್, ಐ.ಪಿ.ಎಸ್, ಅಪರ ಪೊಲೀಸ್ ಮಹಾ ನಿರ್ದೇಶಕರು, ಆರ್ಥಿಕ ಅಪರಾಧಗಳು ಮತ್ತು ಮುಖ್ಯಸ್ಥರು ವಿಶೇಷ ತನಿಖಾ ತಂಡ(ಎಸ್ಐಟಿ), ಸಿಐಡಿ, ಕಾರ್ಲ್‌ಟನ್ ಭವನ, ಬೆಂಗಳೂರು.
4. ಶ್ರೀ ಲಭುರಾಮ್ ಐ.ಪಿ.ಎಸ್, ಪೊಲೀಸ್ ಮಹಾನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು.
5. ಶ್ರೀಮತಿ ಸೌಮ್ಯಲತ ಐ.ಪಿ.ಎಸ್, ಪೊಲೀಸ್ ಅಧೀಕ್ಷಕರು, ರೈಲ್ವೇಸ್, ಬೆಂಗಳೂರು.
6. ಶ್ರೀ ಸಿ.ಎ.ಸೈಮನ್, ಪೊಲೀಸ್ ಅಧೀಕ್ಷಕರು, (ಪ್ರಸ್ತುತ ಸ್ಥಳನಿರೀಕ್ಷಣೆ).
7. ಹೆಚ್ಚುವರಿ ಪ್ರತಿ/ಶಾಖಾ ರಕ್ಷ ಕಡತ.

**ಪ್ರತಿಯನ್ನು:**

1. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಮಾನ್ಯ ಗೃಹ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ರವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಿಸಿಎಎಸ್), ಒಳಾಡಳಿತ ಇಲಾಖೆ ರವರ ಆಪ್ತ ಕಾರ್ಯದರ್ಶಿ ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಜಂಟಿ ಕಾರ್ಯದರ್ಶಿ(ಅಪರಾಧಗಳು, ಸೆರೆಮನೆ ಮತ್ತು ಸಿನಿಮಾ), ಒಳಾಡಳಿತ ಇಲಾಖೆ ರವರ ಆಪ್ತ ಸಹಾಯಕರು, ವಿಧಾನಸೌಧ, ಬೆಂಗಳೂರು.